88

# ವಿಧಾನ ಪರಿಷತ್ತು
# ಶೂನ್ಯವೇಳೆ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರವಿಕುಮಾರ್ ಎನ್, ಇವರು ಶೂನ್ಯ ವೇಳೆಯಲ್ಲಿ ದಾವಣಗೆರೆ ಚಿಗಟೇರಿ ಜಿಲ್ಲಾ ಆಸ್ಪತ್ರೆ ಮೂಲಕಟ್ಟಡ 1962 ರಲ್ಲಿ ನಿರ್ಮಾಣವಾಗಿದ್ದು, 1978ರಲ್ಲಿ ಕಟ್ಟಡವನ್ನು ವಿಸ್ತರಿಸಿ ಈಗಿನ ಕಟ್ಟಡ ನಿರ್ಮಾಣ ಮಾಡಲಾಗಿದೆ. ಸದರಿ ಜಿಲ್ಲಾ ಆಸ್ಪತ್ರೆಗೆ ದಾವಣಗೆರೆ ಜಿಲ್ಲೆಯಿಂದ ಮಾತ್ರವಲ್ಲ ನೆರೆಯ ಚಿತ್ರದುರ್ಗ, ವಿಜಯನಗರ ಜಿಲ್ಲೆಯ ಹರಪನಹಳ್ಳಿ, ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಜನರೂ ಕೂಡ ಚಿಕಿತ್ಸೆಗಾಗಿ ಇದೇ ಆಸ್ಪತ್ರೆಯನ್ನು ಆಶ್ರಯಿಸಿರುತ್ತಾರೆ. ಚಿಗಟೇರಿ ಆಸ್ಪತ್ರೆಯು ಪೂರ್ತಿ ಶಿಥಿಲಾವಸ್ಥೆಗೆ ತಲುಪಿದ್ದು, ಮಳೆ ಬಂದರೆ ಎಲ್ಲೆಂದರಲ್ಲಿ ಮಾಳಿಗೆ ಸೋರುವುದರ ಜೊತೆಗೆ ಕುಸಿದು ಬೀಳುವ ಸ್ಥಿತಿಯಲ್ಲಿದ್ದು, ಒಳರೋಗಿಗಳು ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಯುಜಿಡಿ ವ್ಯವಸ್ಥೆ ಸಂಪೂರ್ಣ ಹಾಳಾಗಿದ್ದು, ಪೂರ್ತಿ ಆಸ್ಪತ್ರೆಯೇ ಐ.ಸಿ.ಯುನಲ್ಲಿ ಇರುವಂತಹ ಸ್ಥಿತಿ ನಿರ್ಮಾಣವಾಗಿದೆ. ಸಾರ್ವಜನಿಕರಿಗೆ ತೀವ್ರ ಒತ್ತಾಯದ ಮೇರೆಗೆ 2025-26ನೇ ಸಾಲಿನ ಆಯವ್ಯಯದಲ್ಲಿ ಆಸ್ಪತ್ರೆಯ ನವೀಕರಣಕ್ಕೆ ರೂ.30.00 ಕೋಟಿ ಅನುದಾನ ಘೋಷಣೆಯಾಗಿದ್ದು, ಕೂಡಲೇ ನವೀಕರಣ ಪ್ರಕ್ರಿಯೆ ಆರಂಭಿಸಿ ಬಡರೋಗಿಗಳಿಗೆ ಆಶ್ರಯಿಸಿರುವ ಸದರಿ ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆ ನೀಡಲು ಅನುವುಮಾಡಿಕೊಡುವ ಬಗ್ಗೆ.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ-**

ದಾವಣಗೆರೆ ಚಿಗಟೇರಿ ಜಿಲ್ಲಾ ಆಸ್ಪತ್ರೆ ಮೂಲಕಟ್ಟಡ 1962ರಲ್ಲಿ ನಿರ್ಮಾಣವಾಗಿದ್ದು, 1976-ನೇ ಸಾಲಿನಲ್ಲಿ 930 ಹಾಸಿಗೆಗಳ ಸಾಮರ್ಥ್ಯವಿರುವಂತೆ ನೆಲ, ಮೊದಲನೇ ಮತ್ತು ಎರಡನೇ ಮಹಡಿಗಳ ಕಟ್ಟಡಗಳನ್ನು ನಿರ್ಮಿಸಲಾಗಿರುತ್ತದೆ. ಸದರಿ ಕಟ್ಟಡವು ಬಹಳ ಹಳೆಯದಾಗಿದ್ದು, ದುರಸ್ಥಿ/ಉನ್ನತೀಕರಣ ಕಾಮಗಾರಿಗಳನ್ನು ಕೈಗೊಂಡು ಆಸ್ಪತ್ರೆಯನ್ನು ಸುಸ್ತಿತಿಯಲ್ಲಿಡುವುದು ಕಷ್ಟವಾದ ಕಾರಣ 2025-26ನೇ ಸಾಲಿನ ಆಯವ್ಯಯದಲ್ಲಿ ಹೊಸದಾಗಿ ಆಸ್ಪತ್ರೆಯ ಕಟ್ಟಡವನ್ನು ನವೀಕರಣ ಮಾಡಲು ಘೋಷಿಸಲಾಗಿರುತ್ತದೆ. ಇದರನ್ವಯ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮುಂದುವರೆದು, ಸದರಿ ಆಸ್ಪತ್ರೆಯಲ್ಲಿ ಹಾಗೂ ಆಸ್ಪತ್ರೆಯ ಆವರಣದಲ್ಲಿ ಕೈಗೊಂಡಿರುವ ಹಾಗೂ ಕೈಗೊಳ್ಳಲಾಗುತ್ತಿರುವ ಕಾಮಗಾರಿಯ ವಿವರಗಳು ಈ ಕೆಳಕಂಡಂತಿವೆ.

2025-26ನೇ ಸಾಲಿನ ಆಯವ್ಯಯ ಭಾಷಣದ ಖಂಡಿಕೆ-138 ರಲ್ಲಿ ದಾವಣಗೆರೆ ಜಿಲ್ಲಾ ಆಸ್ಪತ್ರೆಯನ್ನು ಸೇರಿದಂತೆ ಇತರೆ ಆಸ್ಪತ್ರೆಗಳ ನವೀಕರಣ ಕೈಗೊಳ್ಳಲು ಘೋಷಿಸಲಾಗಿದೆ. ಇದರನ್ವಯ ದಾವಣಗೆರೆ ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಕಾಮಗಾರಿಯನ್ನು ಕೈಗೊಳ್ಳಲು ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಚಿಗಟೇರಿಯ ಜಿಲ್ಲಾಸ್ಪತ್ರೆಯ ಆವರಣದಲ್ಲಿ 50 ಹಾಸಿಗೆಗಳ ಕ್ರಿಟಿಕಲ್ ಕೇರ್ ಯುನಿಟ್ ಅನ್ನು ಅಂದಾಜು ಮೊತ್ತ ರೂ.1663.00 ಲಕ್ಷಗಳಲ್ಲಿ ನಿರ್ಮಿಸುವ ಕಾಮಗಾರಿಯ ಗುತ್ತಿಗೆ ಕರಾರನ್ನು ದಿನಾಂಕ:25.02.2025ರಂದು ನಿಗದಿಪಡಿಸಲಾಗಿದೆ.

ದಾವಣಗೆರೆಯ ಜಿಲ್ಲಾ ಆಸ್ಪತ್ರೆಯ ಓ.ಹೆಚ್.ಟಿ ಹಾಗೂ ಇತರೆ ಮೂಲಭೂತ ಸೌಕರ್ಯಗಳ ಅಂದಾಜು ರೂ. 612.00 ಲಕ್ಷಗಳ ಮೊತ್ತದ ಕಾಮಗಾರಿಗೆ ಆದೇಶ ಸಂಖ್ಯೆ:ಆಕುಕ 398 ಸಿಜಿಎಂ 2024 ದಿನಾಂಕ:30.01.2025ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಪ್ರಸ್ತುತ ಟೆಂಡರ್ ಆಹ್ವಾನಿಸುವ ಪ್ರಕ್ರಿಯೆಯು ಚಾಲನೆಯಲ್ಲಿದೆ.

ದಾವಣಗೆರೆ ಜಿಲ್ಲಾಸ್ಪತ್ರೆಯ ಆವರಣದಲ್ಲಿ ಹೊಸದಾಗಿ 100ಹಾಸಿಗೆಗಳ ಸಾಮರ್ಥ್ಯದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ವಸತಿ ಗೃಹಗಳ ಕಾಮಗಾರಿಗಳನ್ನು ಅಂದಾಜು ರೂ. 2090.00 ಲಕ್ಷಗಳಿಗೆ ಕೈಗೊಳ್ಳಲು ಆದೇಶ ಸಂಖ್ಯೆ:ಆಕುಕ 65 ಸಿಜಿಎಂ 2019 ದಿನಾಂಕ:03.07.2019ರಲ್ಲಿ ಹಾಗೂ ಸದರಿ ಆಸ್ಪತ್ರೆಯನ್ನು 100 ರಿಂದ 200 ಹಾಸಿಗೆಗಳ ಸಾಮರ್ಥ್ಯಕ್ಕೆ ಅಂದಾಜು ಮೊತ್ತ ರೂ. 1300.00 ಲಕ್ಷಗಳಲ್ಲಿ ಮೇಲ್ದರ್ಜೆಗೇರಿಸಲು ಆದೇಶ ಸಂಖ್ಯೆ:ಆಕುಕ 262 ಸಿಜಿಎಂ 2022 ದಿನಾಂಕ:25.11.2022ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಪ್ರಸ್ತುತ ಕಾಮಗಾರಿಯು ಮುಕ್ತಾಯಗೊಂಡಿರುತ್ತದೆ.

ದಾವಣಗೆರೆ ಜಿಲ್ಲಾಸ್ಪತ್ರೆಯ ಆವರಣದಲ್ಲಿ ಟ್ರಾಮಾಕೇರ್ ಸೆಂಟರ್‌ಅನ್ನು ಅಂದಾಜು ಮೊತ್ತ ರೂ. 1550.00 ಲಕ್ಷಗಳಿಗೆ ನಿರ್ಮಾಣ ಮಾಡಲು ದಾವಣಗೆರೆಯ ಸ್ಮಾರ್ಟ್ ಸಿಟಿ ಯೋಜನೆಯಡಿ ದಿನಾಂಕ:31.08.2020ರಲ್ಲಿ ಅನುಮೋದನೆಯಾಗಿದ್ದು, ಪ್ರಸ್ತುತ ಕಾಮಗಾರಿಯು ಮುಕ್ತಾಯಗೊಂಡಿರುತ್ತದೆ.

**ಆಕುಕ 69 ಎಸ್ ಎಂಎಂ 2025**

**(ದಿನೇಶ್ ಗುಂಡೂರಾವ್)**
ಆರೋಗ್ಯಮತ್ತುಕುಟುಂಬಕಲ್ಯಾಣಇಲಾಖೆ